ಹೊಸಪೇಟೆ ನಗರಸಭೆಯವರಿಂದ ವ್ಯಾಪಾರಸ್ಥರಿಗೆ ಕಿರುಕುರೆವಾಗುತ್ತಿರುವ ಬಗ್ಗೆ

೮೬೧. ಶ್ರೀ ಎಂ. ರಾಮಪ್ಪ (ಬಳ್ಳಾರಿ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೊಸಪೇಟೆ ನಗರಸಭೆಯು ವ್ಯಾಪ್ತಿಗೊಳಪಟ್ಟ ವ್ಯಾಪಾರಸ್ಥರಿಗೆ ನಗರ ಸಭೆಯಿಂದ ಕಿರುಕುಳವಾಗುತ್ತಿರುವುದು ನಿಜವಲ್ಲವೇ ಮತ್ತು ಸಣ್ಣ ವ್ಯಾಪಾರಿಗಳ ಸಂಘದಿಂದ ಈ ಬಗ್ಗೆ ರಿಟ್ ಅರ್ಜಿ ಸಲ್ಲಿಸಲಾಗಿದೆಯೇ ಅಥವಾ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆಯೆ.

ಆ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಹೊಸಪೇಟೆ ನಗರಸಭೆ ವ್ಯಾಪ್ತಿಗೊಳಪಟ್ಟ ವ್ಯಾಪಾರಸ್ಥರಿಗೆ ಕಿರುಕುಳ ನೀಡುವ ವಿಷಯ ಸತ್ಯಕ್ಕೆ ದೂರವಾದುದು. ವ್ಯಾಪಾರಸ್ಥರು ಪೌರಾಡಳಿತ ನಿರ್ದೇಶಕರಿಗೆ ನಗರಸಭೆ ವಿರುದ್ಧ ಆರೋಪಿಸಿ ಮನವಿ ಸಲ್ಲಿಸಿರುತ್ತಾರೆ. ಸದರಿ ವ್ಯಾಪಾರಸ್ಥರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿರುವುದು ನಿಜವೆಂದು ಕಂಡು ಬರುತ್ತದೆ. ಹಾಗೂ ನಗರಸಭೆಯ ವಿರುದ್ಧ ನ್ಯಾಯಾಲಯ ನಿಂಧನೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆ) ಈ ಬಗ್ಗೆ ದಿನಾಂಕ ೨೨-೧೨-೧೯೮೭ರಂದು ಪೌರಾಡಳಿತ ನಿರ್ದೇಶಕರು ಹಾಲೀ ಇರುವ ತರಕಾರಿ ಮಾರುಕಟ್ಟೆಯ ಸ್ಥಳ ಮತ್ತು ಕಟ್ಟುತ್ತಿರುವ ಹೊಸ ಮಾರುಕಟ್ಟೆಯ ಸ್ಥಳ ತನಿಖೆ ಮಾಡಿರುತ್ತಾರೆ. ದಿನಾಂಕ ೩೦-೧೨-೧೯೮೭ರಂದು ನಗರಸಭೆಯ ಸದಸ್ಯರು ಮತ್ತು ತರಕಾರಿ ವ್ಯಾಪಾರಿಗಾರರ ಸಂಘದ ಪ್ರತಿನಿಧಿಗಳು ನಗರಸಭೆಯ ಸಭಾಂಗಣದಲ್ಲಿ ಫ್ಲೂಟಿಂಗ್ ವೇಳೆಯಲ್ಲಿ ಹಾಜರಿದ್ದು: ನಗರ ಸಭೆಯ ಮತ್ತು ಸಂಘದ ಪ್ರತಿನಿಧಿಗಳ ಸಲಹೆ ಸೂಚನೆಗಳನ್ನು ಗಣನೆಗೆ ತೆಗೆದುಕೊಂಡು ಪೌರಾಯುಕ್ತರಿಗೆ ಸದರಿ ಸಭೆಯಲ್ಲಿ ನಡೆದ ತೀರ್ಮಾನ ಮತ್ತು ನಡವಳಿಗಳನ್ನು ಕಾರ್ಯ ರೂಪಕ್ಕೆ ತರಲು ಆದೇಶಿಸಲಾಗಿದೆ.

I.U.D.P. Hospet

861. SRI M. RAMAPPA (Bellary).—Will the Minister for Urban Development be pleased to state.—

a) Whether any Counter check are being made from 1980 till date about the implementation of various schemes sponsored under Integrated Development Programme in Hospet.

b) If so, the result there of and if not the reasons thereof ?

SRI M. CHANDRASHEKAR (Minister for Urban Development).

a) Yes. Town level Co-ordinating monitoring Committee of Hospet are counter checking the works of the various schemes sponsored under IDSMT.

b) Town level Co-ordinating/monitering Committee for Hospet is constituted vide G O. No. HUD 210 TTI 80 (ii) Bangalore dated 6-4-1981 under the chairmanship of D.C. Bellary.